ಎಂ.ವಿ.ಸಿಃ 477/2022 ಪಿಡಬ್ಲೂ - 1: Syed Husen

ದಿನಾಂಕಃ 07.02.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಶ್ರೀ ಎಂ.ವಿ.ಜಿ. ವಕೀಲರಿಂದಃ**

ಮೋಟಾರ್ ಸೈಕಲ್ ಚಲಾಯಿಸಲು ನನಗೆ ಚಾಲನಾ ಪತ್ರ ಇತ್ತು, ಅದು ಕಳೆದು ಹೋಗಿದೆ. ನನ್ನ ಹತ್ತಿರ ಚಾಲನಾ ಪತ್ರ ಇರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಲನಾ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ಯಾವುದೇ ತೊಂದರೆ ಇಲ್ಲ. ಅಪಘಾತದ ದಿವಸ ನಾನು ಎಕ್ಸೆಲ್ ವಾಹನದಲ್ಲಿ ಹೋಗುತ್ತಿದ್ದೆ. ಸದರಿ ವಾಹನಕ್ಕೆ ನಾನೇ ಮಾಲೀಕ. ಆರ್.ಸಿ. ಪುಸ್ತಕದ ಜೆರಾಕ್ಸ್ ಪ್ರತಿಯನ್ನು ಕೊಟ್ಟಿದ್ದೇನೆ. ಎಕ್ಸೆಲ್ ವಾಹನಕ್ಕೆ ವಿಮೆ ಮಾಡಿಸಿದ್ದೇನೆ. ಆ ವಿಮೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಆ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಹತ್ತಿರ ಚಾಲನಾ ಪತ್ರ ಇರಲಿಲ್ಲ, ಆದ್ದರಿಂದ ಮೊಪೆಡ್ ಚಲಾಯಿಸಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಮೊಪೆಡ್ ಚಲಾಯಿಸಲು ಬರದಿದ್ದರೂ ಕೂಡ ಹೆಲ್ಮೆಟ್ ಹಾಕದೇ ಚಾಲನೇ ಮಾಡಿದ್ದರಿಂದ ನಾನೇ ಬಿದ್ದು ಬಾಯ ಮಾಡಿಕೊಂಡೆ ಎಂದರೆ ಸರಿಯಲ್ಲ. ನನ್ನ ಮೊಪೆಡ್ ಸಂಃ 2377. ದಿಃ 12.11.2022 ರಲ್ಲಿ ಅಪಘಾತ ನಡೆದಿದೆ. ನನ್ನ ವಾಹನಕ್ಕೂ ಆಕ್ಟಿವಾ ವಾಹನಕ್ಕೂ ಅಪಘಾತ ನಡೆಯಿತು. ಆಕ್ಟಿವ ವಾಹನದ ಸಂಃ 7005. ಆಕ್ಟಿವ ವಾಹನ ಚಲಾಯಿಸುತ್ತಿದ್ದ ಸವಾರನಿಗೆ ಚಾಲನಾ ಪತ್ರ ಇರಲಿಲ್ಲ ಎನ್ನುವುದು ಗೊತ್ತಿಲ್ಲ. ಅಪಘಾತವಾದ ನಂತರ ಪ್ರಜ್ವಲ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡೆ. ಆ ನಂತರ ಡಾಕ್ಟರ್ ವಾಸನ್ ಹತ್ತಿರ ಚಿಕಿತ್ಸೆ ಪಡೆದುಕೊಂಡೆ. ಡಾಕ್ಟರ್ ವಾಸನ್ ಹತ್ತಿರ ಚಿಕಿತ್ಸೆ ಪಡೆದುಕೊಂಡಿದ್ದಕ್ಕೆ ಅರ್ಜಿಯಲ್ಲಾಗಲೀ, ಪೊಲೀಸ್ ದಾಖಲೆಯಲ್ಲಾಗಲೀ ನಮೂದಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಪೊಲೀಸರಿಗೆ ದೂರನ್ನು ಕೊಟ್ಟಿದ್ದಾರೆ. ನನ್ನ ಮಗ ಅಪಘಾತವನ್ನು ಕಣ್ಣಾರೆ ನೋಡಿಲ್ಲ, ಆ ನಂತರ ಬಂದ. ಅಪಘಾತವಾಗಿ ಒಂದು ತಿಂಗಳ ನಂತರ ನನ್ನ ಮಗ ದೂರನ್ನು ಕೊಟ್ಟಿದ್ದಾನೆ. ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯಲ್ಲಿ ನನ್ನ ಮಗ ದೂರನ್ನು ಕೊಟ್ಟಿದ್ದಾನೆ. ನಿಪಿ-1 ರಲ್ಲಿ ಸಿದ್ದಾರ್ಥನಗರ ಪೊಲೀಸ್ ಠಾಣೆ ಎಂದು ಕಾಣಿಸಿದ್ದಾರೆ ಎನ್ನುವುದು ನಿಜ. ಅಪಘಾತವಾದ ಕೂಡಲೇ ದೂರನ್ನು ಕೊಡಲು ತೊಂದರೆ ಇರಲಿಲ್ಲ ಎಂದರೆ, ನನ್ನ ಮೊಬೈಲ್ ಅಲ್ಲೆ ಬಿದ್ದು ಹೋಗಿತ್ತು, ಆ ಕಾರಣಕ್ಕಾಗಿ ದೂರು ಕೊಡಲು ಆಗಲಿಲ್ಲ. ನಿಪಿ-5 ರಲ್ಲಿ ಯಾವಾ ವಾಹನದಿಂದ ಅಪಘಾತವಾಯಿತು ಎನ್ನುವುದನ್ನು

ಕಾಣಿಸಲಿಲ್ಲ ಎನ್ನುವುದು ನಿಜ. ಯಾವುದೇ ವಾಹನ ನನಗೆ ಅಪಘಾತ ಪಡಿಸಲಿಲ್ಲ, ನಾನೇ ಸ್ವತಃ ಬಿದ್ದು ಗಾಯ ಮಾಡಿಕೊಂಡೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಆ್ಯಕ್ಟಿವ್ ಹೊಂಡಾ ವಾಹನ ಒಳಪಟ್ಟಿಲ್ಲ, ನಾನು ಪೊಲೀಸರ ಜೊತೆ ಶಾಮಿಲಾಗಿ ಅಂತಿಮ ವರದಿಯಲ್ಲಿ ಕಾಣಿಸಿದ ವಾಹನದ ಮೇಲೆ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಮೆಡಿಕಲ್ ಬಿಲ್ಲುಗಳನ್ನು ಸೃಷ್ಠಿ ಮಾಡಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯಗಳು ಆಗಲಿಲ್ಲ ಎಂದರೆ ಸರಿಯಲ್ಲ. ಯಾವುದೇ ರೀತಿ ಅಂಗನ್ಯೂನತೆ ಆಗಲಿಲ್ಲ ಎಂದರೆ ಸರಿಯಲ್ಲ. ನನಗೆ ಈವಾಗ 54 ವರ್ಷ ವಯಸ್ಸು. ನನ್ನ ವಯಸ್ಸನ್ನು ತೋರಿಸಲು ಆಧಾರ್ ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಜರು ಮಾಡಿದ್ದೇನೆ. ನಾನು ಹಾಜರು ಮಾಡಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 60 ವರ್ಷಕ್ಕಿಂತ ಜಾಸ್ತಿ ಆಗಿದೆ ಎಂದರೆ ಸರಿಯಲ್ಲ. ನಾನು ಯಾವುದೇ ಸಮೋಸ ವ್ಯಾಪಾರ ಮಾಡುತ್ತಿರಲಿಲ್ಲ, ಪ್ರತಿ ತಿಂಗಳು ರೂ.30,000/- ದುಡಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಯಾವುದೇ ದಾಖಲೆ ಹಾಜರು ಮಾಡಿಲ್ಲ. ನಾನು, ಪೊಲೀಸರು, ಆಸ್ಪತ್ರೆಯವರು ಸೇರಿ ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ಪರಿಹಾರ ಹಣ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಎದುರುದಾರರು ಯಾವುದೇ ಪರಿಹಾರ ಹಣ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ**: ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.